**1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು, ದ.ಕ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1067/2025**

**ಆರೋಪಿಯ ಹೆಸರು** : ಹರೀಶ್ ಪಿ
**ತಂದೆಯ ಹೆಸರು** : ಅಲಿ ಬ್ಯಾರಿ
**ವಯಸ್ಸು** : 36 ವರ್ಷ
**ಉದ್ಯೋಗ** : ವ್ಯಾಪಾರ
**ವಾಸ್ತವ್ಯ** : ಪಾತುಂಜಾ ಮನೆ, ಕೆಯ್ಯೂರ ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ, ಕರ್ನಾಟಕ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆ**

ಪ್ರಶ್ನೆ ನಂ.1 ನೀವು ನ್ಯಾಯಾಲಯದ ಮುಂದೆ ವಿಚಾರಣೆಯಾದ ಎಲ್ಲಾ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ ?

ಉತ್ತರ

ಪ್ರಶ್ನೆ ನಂ.2 ಪ್ರಾಸಾ-1(ಶ್ರೀ ಕೆ ಎಮ್ ಹನೀಫ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಘಟನೆಯಾಗುವ ಸಮಯದಲ್ಲಿ ನಾನು ಮತ್ತು ಚಾಸಾ-3 ಕೆಯ್ಯೂರು ಗ್ರಾಮಪಂಚಾಯಿತಿಯ ಮಾಜಿ ಸದಸ್ಯರಾಗಿದ್ದೆವು. ಚಾಸಾ-2 ರವರು ಕೆಯ್ಯೂರು ಗ್ರಾಮಪಂಚಾಯಿತಿಯ ಸದಸ್ಯರಾಗಿದ್ದರು. ದಿ.1-6-25 ರಂದು ಬೆ.9.45 ಕ್ಕೆ ಚಾಸಾ-2 ರವರು ನನಗೆ ಫೋನ ಮಾಡಿ ಕೆಯ್ಯೂರು ಗ್ರಾಮದ ಪಾತುಂಜ ಎಂಬಲ್ಲಿ ಅಬ್ದುಲ್ ಖಾದರ್ ರವರ ಮನೆಯ ಮೇಲ್ಛಾವಣಿ ಗಾಳಿ ಮಳೆಗೆ ಬಿದ್ದಿದೆ , ಅದನ್ನು ಪರಿಶೀಲಿಸಲು ನಾನು ಮತ್ತು ಚಾಸಾ-3 ರವರು ಹೋಗುತ್ತಿದ್ದೇವೆ, ನೀವು ಕೂಡಾ ಬನ್ನಿ ಎಂದು ಕರೆದರು. ನಾವು ಜೊತೆಯಾಗಿ ಹೋದೆವು. ಬೆ. 10.0 ಗಂಟೆ ಸಮಯದಲ್ಲಿ ದಾರಿಯ ಮಧ್ಯೆ ಪಾತುಂಜದಲ್ಲಿನ ಅಬ್ದುಲ್ ಖಾದರ್ ರವರ ಅಕ್ಕ ರುಕ್ಯರವರ ಮನೆಯ ಅಂಗಳಕ್ಕೆ ಹೋದಾಗ ಆರೋಪಿ ಅಲ್ಲಿಗೆ ಬಂದು ನಮ್ಮನ್ನು ಮುಂದಕ್ಕೆ ಹೋಗದಂತೆ ತಡೆದು ನಿಲ್ಲಿಸಿ ರಂಡೆ ಮಗ ಬೇವರ್ಸಿ, ಇಲ್ಲಿಗೆ ಏಕೆ ಬಂದಿದ್ದೀರಿ, ಇಲ್ಲಿಂದ ಹೋಗಿ ನಾಯಿಗಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಏಕಾಏಕಿಯಾಗಿ ನನ್ನ ಎಡಕೈಗೆ

ಕೈಯಿಂದ ಹೊಡೆದರು. ಆಗ ಚಾಸಾ-2 ರವರು ಬಿಡಿಸಲು ಬಂದರು. ಅವರನ್ನು ಆರೋಪಿ ದೂಡಿ ಹಾಕಿದರು ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.3 ಫ್ರಾಸಾ-1 ರವರು ಮುಂದುವರಿದು ನಂತರ ಅಲ್ಲಿದ್ದ ಚಾಸಾರ**-3** ರವರ ಎಡಕೈಗೆ ಆರೋಪಿ ಕೈಯಿಂದ ಹೊಡೆದರು**.** ನಂತರ ನಾವು ಸಂಪ್ಯ ಪೋಠಾಣೆಗೆ ಹೋಗಿದ್ದು ನಾನು ಆರೋಪಿಯ ವಿರುದ್ಧ ದೂರು ನೀಡಿದ್ದೇನೆ**.** ನಂತರ ಪೊಲೀಸರು ನಮ್ಮನ್ನು ಪುತ್ತೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿರುತ್ತಾರೆ**.** ಅಲ್ಲಿ ವೈದ್ಯರು ಚಿಕಿತ್ಸೆ ಕೊಟ್ಟಿರುತ್ತಾರೆ**.** ನನ್ನ ಎಡಗೈಗೆ ರಕ್ತ ಹೆಪ್ಪುಗಟ್ಟಿದ ಗಾಯವಾಗಿತ್ತು**,** ಚಾಸಾ**-2** ರವರ ಮೈ ಕೈಗೆ ನೋವಾಗಿತ್ತು**,** ಚಾಸಾ**-3** ರವರ ಎಡಗೈ ಬೆರಳಿಗೆ ಗಾಯವಾಗಿತ್ತು**.** ನಿಪಿ**-2** ಕ್ಕೆ ನಾನು ಗಲಾಟೆ ನಡೆದ ಸ್ಥಳದಲ್ಲಿ ಸಹಿ ಮಾಡಿದ್ದೇನೆ**.** ಅಲ್ಲಿ ಮಹಜರು ಮಾಡಲು ಜಯಶ್ರೀ ಎನ್ನುವ ಪೊಲೀಸರು ಬಂದಿದ್ದರು**.** ಗಲಾಟೆ ನಡೆದ ಸ್ಥಳವನ್ನು ನಾನು ಅವರಿಗೆ ತೋರಿಸಿದ್ದೇನೆ**.** ದೂರು ಕೊಟ್ಟ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾರೆ**.** ಗಲಾಟೆ ಬೆ**.10.00** ಗಂಟೆ ಸಮಯದಲ್ಲಿ ಆಗಿರುತ್ತದೆ**.** ನನಗೆ ಹಲ್ಲೆ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.4 ಫ್ರಾಸಾ-2(ಶ್ರೀ ಜಯಂತ ಪೂಜಾರಿ ಕೆ ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಚಾಸಾ-1 ರವರು ಘಟನಾ ಕಾಲದಲ್ಲಿ ಕೆಯ್ಯೂರು ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯರಾಗಿದ್ದರು. ಚಾಸಾ-3 ಸದರಿ ಗ್ರಾಮಪಂಚಾಯಿತಿಯ ಮಾಜಿ ಅಧ್ಯಕ್ಷರು. ನಾನು 2021 ರಿಂದ 2026 ರ ವರೆಗೆ ಮೇಲೆ ತಿಳಿಸಿದ ಗ್ರಾಮ ಪಂಚಾಯಿತಿಯ ಸದಸ್ಯನಾಗಿದೇನೆ. ದಿ.1.6.2025 ರಂದು ಕೆಯ್ಯೂರು ಗ್ರಾಮದ ಪಾತುಂಜ ಎಂಬಲ್ಲಿ ಒಬ್ಬ ವ್ಯಕ್ತಿಯ ಮನೆಯ ಹೆಂಚು ಹಾಗೂ ಮೇಲ್ಛಾವಣಿ ಗಾಳಿ ಮಳೆಗೆ ಹೋಗಿತ್ತು. ನಾನು ಆ ದಿನ ಅಬ್ದುಲ್ ಖಾದರ್ ಎನ್ನುವವರ ಮನೆಗೆ ಹೋಗಿದ್ದೆನು. ಮನೆ ಹಾನಿಯಾಗಿದ್ದ ವ್ಯಕ್ತಿಗೆ ಸರ್ಕಾರದಿಂದ ದೊರಕಬಹುದಾದ ಪರಿಹಾರವನ್ನು ಕೊಡುವ ಸಲುವಾಗಿ ನಾನು, ಚಾಸಾ-1 ಮತ್ತು 3 ರವರಿಗೆ ಸ್ಥಳಕ್ಕೆ ಹೋಗೋಣ ಎಂದು ತಿಳಿಸಿದ್ದೆನು. ಸದರಿ ಸ್ಥಳಕ್ಕೆ ಹೋಗುವ ಸಮಯದಲ್ಲಿ ಪಾತುಂಜದ ರುಕಿಯಾ ಎನ್ನುವವರ ಮನೆಯ ಅಂಗಳಕ್ಕೆ ಹೋದಾಗ ಬೆ.10.00 ರ ಸಮಯದಲ್ಲಿ ಆರಿಸ್ ಎನ್ನುವವರು ಚಾಸಾ-1 ರವರನ್ನು ತಡೆದು ಬೇವರ್ಸಿ ರಂಡೆ ಮಗ, ನಾಯಿಗಳು ನೀವ್ಯಾಕೆ ಇಲ್ಲಿ ಬಂದಿರಿ ಹೋಗಿ ಇಲ್ಲಿಂದ ಎಂದು ಬೈದು ಕೈಯಿಂದ ಚಾಸಾ-1 ರವರಿಗೆ ಹೊಡೆಯಲು ಬಂದರು. ಸಾಕ್ಷಿ ಮುಂದುವರಿದು ಚಾಸಾ-1 ರವರಿಗೆ ಆರೋಪಿ

ಕೈಯಿಂದ ಎಡಗೈಗೆ ಹೊಡೆದಿರುತ್ತಾರೆ. ಆಗ ನಾವು ತಡೆಯಲು ಹೋದೆವು, ಆಗ ಆರೋಪಿ ನನ್ನನ್ನು, ಚಾಸಾ-3 ರವರನ್ನು ದೂಡಿದ ಕಾರಣ ನಾನು ಕೆಳಗೆ ಬಿದ್ದಿದ್ದು ಚಾಸಾ-3 ರವರ ಎಡಗೈ ಹೆಬ್ಬೆರಳಿಗೆ ಪೆಟ್ಟಾಗಿರುತ್ತದೆ. ನಂತರ ನಾವು ಪೋ ಠಾಣೆಗೆ ಹೋಗಿದ್ದು ಚಾಸಾ1 ರವರು ದೂರನ್ನು ಕೊಟ್ಟಿದ್ದಾರೆ. ಪೋ ಠಾಣೆಯಿಂದ ನಂತರ ನಾವು ಪುತ್ತೂರಿನ ಸರ್ಕಾರೀ ಆಸ್ಪತ್ರೆಗೆ ಹೋಗಿದ್ದೇವೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಬಿದ್ದ ಕಾರಣ ನನ್ನ ಮೈಗೆ ನೋವಾಗಿತ್ತು. ಚಾಸಾ-3 ರವರ ಎಡಗೈ ಹೆಬ್ಬೆರಳಿಗೆ ರಕ್ತಗಾಯವಾಗಿತ್ತು. ಚಾಸಾ-1 ರವರ ಎಡಗೈಗೆ ರಕ್ತ ಕಂದಿದ ಗಾಯವಾಗಿತ್ತು. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.5 ಪ್ರಾಸಾ-3(ಶ್ರೀ ಎ ಕೆ ಜಯರಾಮ ರೈ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಚಾಸಾ-1 ಕೆಯ್ಯೂರು ಗ್ರಾಮಪಂಚಾಯಿತಿಯ ಮಾಜಿ ಸದಸ್ಯರಾಗಿದ್ದರು. ಘಟನಾ ಕಾಲದಲ್ಲಿ ಚಾಸಾ-2 ರವರು ಸದರಿ ಗ್ರಾಮಪಂಚಾಯಿತಿಯ ಹಾಲಿ ಸದಸ್ಯರಾಗಿದ್ದರು. ನಾನು ಗ್ರಾಮಪಂಚಾಯಿತಿಯ ಮಾಜಿ ಅಧ್ಯಕ್ಷನಾಗಿದ್ದೆನು. ದಿ.1.6.25 ರಂದು ಬೆ.9.30 ರಲ್ಲಿ ಚಾಸಾ-2 ರವರು ನನಗೆ ಫೋನ್ ಮಾಡಿ ಅಬ್ದುಲ್ ಖಾದರ್ ರವರ ಮನೆಯ ಹೆಂಚು ಮತ್ತು ಮೇಲ್ಛಾವಣಿ ಹಾರಿ ಹೋಗಿದೆ ಅದನ್ನು ನೋಡಿ ಬರೋಣ ಎಂದು ತಿಳಿಸಿದ್ದರು. ನಾನು ಮತ್ತು ಚಾಸಾ-1 ಹಾಗೂ 2 ರವರು ಸ್ಥಳಕ್ಕೆ ಬೆ.10.00 ಗಂಟೆಗೆ ಹೋದೆವು. ಅಬ್ದುಲ್ ಖಾದರ್ ರವರ ಮನೆ ಪಾತುಂಜದಲ್ಲಿ ಇತ್ತು. ಮಾರ್ಗ ಮಧ್ಯದಲ್ಲಿ ರುಕಿಯಾ ಎನ್ನುವವರ ಮನೆಯ ಅಂಗಳಕ್ಕೆ ಹೋದಾಗ ನಮ್ಮ ಪರಿಚಯದ ಆರೋಪಿ ನಮ್ಮನ್ನು ತಡೆದು ನಿಲ್ಲಿಸಿ ಏಕಾಏಕಿ ಚಾಸಾ-1 ರವರ ಎಡಗೈಗೆ ಹೊಡೆದನು. ನಾವು ಆತನನ್ನು ತಡೆಯಲು ಪ್ರಯತ್ನಿಸಿದೆವು. ಆಗ ಆರೋಪಿ ನನ್ನನ್ನು ಮತ್ತು ಚಾಸಾ-2 ರವರನ್ನು ದೂಡಿದ್ದು ಅದರಿಂದ ನನ್ನ ಎಡಹೆಬ್ಬೆರಳಿಗೆ ಪೆಟ್ಟಾಯಿತು. ನಂತರ ಆರೋಪಿ ನಮ್ಮನ್ನು ರಂಡೆಮಗ, ಬೇವರ್ಸಿ, ಇಲ್ಲಿಂದ ಹೋಗಿ ನಾಯಿಗಳೇ ಎಂದು ಅವಾಚ್ಯ ಬೈದನು. ನಂತರ ಅಲ್ಲಿಂದ ಬೆ.11.00 ಗಂಟೆಗೆ ಸಂಪ್ಯ ಪೋ. ಠಾಣೆಗೆ ನಾವು ಬಂದಿದ್ದು ಚಾಸಾ-1 ಆರೋಪಿಯ ವಿರುದ್ಧ ದೂರು ದಾಖಲಿಸಿದರು. ನಂತರ ನಾವು ಅಲ್ಲಿಂದ ಪುತ್ತೂರಿನ ಸರ್ಕಾರೀ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇವೆ. ಚಾಸಾ-1 ರವರ ಎಡಕೈಗೆ ರಕ್ತ ಹೆಪ್ಪುಗಟ್ಟಿದ ಗಾಯವಾಗಿತ್ತು. ನನ್ನ ಎಡಹೆಬ್ಬೆರಳಿಗೆ ರಕ್ತ ಹೆಪ್ಪುಗಟ್ಟಿದ ಗಾಯವಾಗಿತ್ತು. ಚಾಸಾ-2 ರವರಿಗೆ ಆರೋಪಿ ದೂಡಿದ್ದ ಕಾರಣ ಅವರ ಮೈ ಕೈಗೆ ನೋವಾಗಿತ್ತು. ಪೋಲೀಸರು ದಿ.2-6-25 ರಂದು ನಮ್ಮ ಹೇಳಿಕೆಯನ್ನು ಪಡೆದಿದ್ದಾರೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.6 ಫ್ರಾಸಾ-4(ಶ್ರೀ ಮಹಮ್ಮದ ರಫೀಕ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ.2 ಕ್ಕೆ ನಾನು ದಿ.02.06.2025 ರಂದು ರುಕಯಾ ಎನ್ನುವವರ ಮನೆಯ ಅಂಗಳದಲ್ಲಿ ಸಹಿ ಮಾಡಿದ್ದೇನೆ. ರುಕಯಾರವರ ಮನೆ ಪಾತುಂಜದಲ್ಲಿರುತ್ತದೆ. ಅಲ್ಲಿಗೆ ಪೋಲಿಸರಿಗೆ ಮಹಜರು ಮಾಡುವ ಸಲುವಾಗಿ ಬಂದಿದ್ದರು. ಪೋಲಿಸರಿಗೆ ಸ್ಥಳದಲ್ಲಿ ಚಾಸಾ1 ರವರು ತಮ್ಮ ಮೇಲೆ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದರು. ಸ್ಥಳದಲ್ಲಿ ಇಸ್ಮಾಯಿಲ್ ಎನ್ನುವವರು ಸಹ ಹಾಜರಿದ್ದರು ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.7 ಫ್ರಾಸಾ-5(ಶ್ರೀ ಇಸ್ಮಾಯಿಲ್ ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ.2 ಕ್ಕೆ ನಾನು ದಿ.02.06.2025 ರಂದು ರುಕಯಾ ಎನ್ನುವವರ ಮನೆಯ ಅಂಗಳದಲ್ಲಿ ಸಹಿ ಮಾಡಿದ್ದೇನೆ. ರುಕಯಾರವರ ಮನೆ ಪಾತುಂಜದಲ್ಲಿರುತ್ತದೆ. ಅಲ್ಲಿಗೆ ಪೋಲಿಸರಿಗೆ ಮಹಜರು ಮಾಡುವ ಸಲುವಾಗಿ ಬಂದಿದ್ದರು. ಸ್ಥಳದಲ್ಲಿ ಹನೀಫರವರ ಮೇಲೆ ಗಲಾಟೆ ಮಾಡಲಾಗಿತ್ತು. ಪೋಲಿಸರಿಗೆ ಸ್ಥಳವನ್ನು ಚಾಸಾ1 ರವರು ತೋರಿಸಿದರು. ನನ್ನ ಸಂಗಡ ಚಾಸಾ5 ಸಹ ಮಹಜರಿಗೆ ಸಹಿ ಮಾಡಿದರು ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.8 ಫ್ರಾಸಾ-6(ಶ್ರೀಮತಿ ನಮಿತಾ ಎ ಕೆ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 08.07.2022 ರಿಂದ ಪ್ರಸ್ತುತವೂ ಸಹ ಕೆಯ್ಯೂರು ಗ್ರಾಮ ಪಂಚಾಯಿತಿಯಲ್ಲಿ ಪಿಡಿಓ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪುತ್ತೂರು ಗ್ರಾಮಾಂತರ ಪೊ. ಅಧಿಕಾರಿಯವರ ಕೋರಿಕೆ ಮೇರೆಗೆ ನಾನು ಕೆಯ್ಯೂರು ಗ್ರಾಮದ ಪಾತುಂಜ ಎಂಬಲ್ಲಿನ ರುಕಿಯಾ ಪೊ ಮಹಮ್ಮದ ರವರಿಗೆ ಕದ ನಂ.1-294 ಕ್ಕೆ ಸಂಬಂಧಿಸಿದಂತೆ ದೃಡಪತ್ರವನ್ನು ನೀಡಿದ್ದೇನೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.9 ಫ್ರಾಸಾ-7(ಶ್ರೀ ಎಂ. ಬಿ. ಅಜಯ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ಕಳೆದ 10 ವರ್ಷಗಳಿಂದ ಪುತ್ತೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 01-06-2023 ರಂದು ನಾನು ಮಧ್ಯಾಹ್ನ 01.40 ರ ಸಮಯದಲ್ಲಿ ಪುತ್ತೂರು ಸರ್ಕಾರಿ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಕರ್ತವ್ಯದಲ್ಲಿ ಇದ್ದಾಗ ಪುತ್ತೂರು ಗ್ರಾಮಾಂತರ ಪೋಲೀಸು ಠಾಣೆಯ ಪಿ.ಸಿ. 485 ರವರು ಎ.ಕೆ. ಜಯರಾಮ ರೈ, ಜಯಂತ ಪೂಜಾರಿ ಮತ್ತು ಹನೀಫ್ ಕೆ.ಎಂ. ಎನ್ನುವವರನ್ನು ಚಿಕಿತ್ಸೆಯ ಸಂಬಂಧ ಹಲ್ಲೆಯ ಹಿನ್ನಲೆಯಲ್ಲಿ ಆದ ಗಾಯಗಳಿಗೆ ಕರೆದುಕೊಂಡು ಬಂದಿದ್ದರು. ನಾನು ಅವರನ್ನು ವಿಚಾರಿಸಿದಾಗ ಅದೇ ದಿನ ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ

ಆತುಂಜ, ಕೆಯ್ಯೂರು ಗ್ರಾಮದಲ್ಲಿ ಕೈಯಿಂದ ಆರೀಸ್ ಎನ್ನುವವರು ಅವರಿಗೆ ಹಲ್ಲೆ ಮಾಡಿದ ಬಗ್ಗೆ ತಿಳಿಸಿದರು ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.10 ಪ್ರಾಸಾ-7 ರವರು ಮುಂದವರಿದು ನಾನು ಎ.ಕೆ. ಜಯರಾಮ ರೈ ರವರನ್ನು ಮಧ್ಯಾಹ್ನ 01.40 ಕ್ಕೆ ಪರೀಕ್ಷಿಸಿದ್ದು ಅವರ ಎಡಗೈ ಹೆಬ್ಬೆರಳಿನ ಮೇಲೆ ಉಬ್ಬಿದ ರೀತಿಯ ಗಾಯ ಆಗಿರುವುದು ಕಂಡು ಬಂತು. ಅವರಿಗೆ ಆಗಿದ್ದ ಗಾಯ ನನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು.ನಾನು ಜಯಂತ್ ಪೂಜಾರಿ ಅವರನ್ನು ಮಧ್ಯಾಹ್ನ 01.50 ಕ್ಕೆ ಪರೀಕ್ಷಿಸಿದ್ದು ಅವರಿಗೆ ಯಾವುದೇ ಗಾಯಗಳು ಆಗದಿಲ್ಲದಿದ್ದುದು ಕಂಡು ಬಂತು. ನಾನು ಹನೀಫ್ ಕೆ.ಎನ್ ರವರನ್ನು ಪರೀಕ್ಷಿಸಿದಾಗ ಅವರ ಎಡ ಕೈಯಲ್ಲಿ ಊತದ ಗಾಯ ಆಗಿದ್ದು ಕಂಡು ಬಂತು. ನನ್ನ ಅಭಿಪ್ರಾಯದಂತೆ ಹನೀಫ್ ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿತ್ತು. ನಾನು ಮೇಲೆ ತಿಳಿಸಿದ ವ್ಯಕ್ತಿಗಳನ್ನು ಪರೀಕ್ಷಿಸಿದ ಸಂಬಂಧ ಪೊಲೀಸರಿಗೆ ಗಾಯದ ಪ್ರಮಾಣಪತ್ರಗಳನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.11 ಪ್ರಾಸಾ-8(ಶ್ರೀಮತಿ ಜಯಶ್ರೀ ಪಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 25-07-2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಮಹಿಳಾ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 01-06-2025 ರಂದು ನಾನು ಹಗಲು ಠಾಣಾ ಪ್ರಭಾರದಲ್ಲಿ ಇದ್ದಾಗ ಬೆಳಿಗ್ಗೆ 11.00 ಗಂಟೆಗೆ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಅ. ಕ್ರ ಸಂಖ್ಯೆ 62/2025 ರಂತೆ ನೋಂದಾಯಿಸಿಕೊಂಡು ಪ್ರ. ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಗೆ ಕಲಂ 35 ಬಿ.ಎನ್ ಎಸ್ಎಸ್ ರೀತಿಯ ನೋಟೀಸು ಜಾರಿಗೊಳಿಸಿರುತ್ತೇನೆ. ದಿನಾಂಕ 02-06-2025 ರಂದು ಘಟನಾ ಸ್ಥಳಕ್ಕೆ ಹೋಗಿ ಸ್ಥಳ ಮಹಜರನ್ನು ಪಂಚರಾದ ಚಾ.ಸಾ.5 ಮತ್ತು ಚಾ.ಸಾ.6 ರವರ ಸಮಕ್ಷಮ ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 01-15 ರಿಂದ 01.45 ರ ವರಗೆ ಜರುಗಿಸಿರುತ್ತೇನೆ. ಆ ಸಮಯ ಹೆಚ್ ಸಿ 895 ರವರು ತಮ್ಮ ಮೊಬೈಲ್ ನಲ್ಲಿ ಸ್ಥಳ ಮಹಜರು ಕ್ರಮವನ್ನು ವಿಡಿಯೋಗ್ರಾಫಿ ಮಾಡಿರುತ್ತಾರೆ. ವಿಡಿಯೋವನ್ನು ಮೊಬೈಲ್ ನಿಂದ ಸಿ.ಡಿ. ಗೆ ವರ್ಗಾಯಿಸಿ ಮತ್ತು ಸಿ.ಡಿ.ಯನ್ನು ಹಾಗೂ ಕಲಂ 63(4) ಭಾ. ಸಾಕ್ಷ್ಯ ಅಧಿನಿಯಮದ ಪ್ರಕಾರ ದೃಢಪತ್ರವನ್ನು ನೀಡಿರುತ್ತಾರೆ. ಸಿ.ಡಿಯನ್ನು ಹಾಗೂ ಸದರಿ ದೃಢಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ.1 ರವರ ಮರುಹೇಳಿಕೆಯನ್ನು ಹಾಗೂ ಸಾಕ್ಷಿದಾರರಾದ

ಚಾ.ಸಾ.2, ಚಾ.ಸಾ.3, ಚಾ.ಸಾ.4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ.12 ರವರಿಗೆ ವಹಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.12 ಫ್ರಾಸಾ-9(ಶ್ರೀಮತಿ ಸುಷ್ಮಾ ಜಿ ಭಂಡಾರಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 05-08-2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 04-07-2025 ರಂದು ಚಾ.ಸಾ.11 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿ ನಂತರ ಚಾ.ಸಾ.1 , ಚಾ.ಸಾ.2 ಹಾಗೂ ಚಾ.ಸಾ.3 ರವರ ಗಾಯದ ಪ್ರಮಾಣಪತ್ರಗಳನ್ನು ಸ್ವೀಕರಿಸಿಕೊಂಡಿರುತ್ತೇನೆ. ಅದೇ ದಿನ ಕೆಯ್ಯೂರು ಗ್ರಾಮ ಪಂಚಾಯತ್ ಪಿಡಿಓ ರವರು ನೀಡಿದ ಘಟನೆ ನಡೆದ ಸ್ಥಳದ ದೃಢಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಸಾಕ್ಷಿದಾರರ ಹೇಳಿಕೆ, ಗಾಯಪ್ರಮಾತಪತ್ರಗಳು, ಪಿಡಿಓ ನೀಡಿದ ದೃಢಪತ್ರವನ್ನು ಪರಿಶೀಲಿಸಿಕೊಂಡು ಅದೇ ದಿನ ದೋಷಾರೋಪಣಾ ಪತ್ರವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.13 : ಆರೋಪಿಯಾದ ನೀನು ಈ ಪ್ರಕರಣದ ಬಗ್ಗೆ ಏನಾದರೂ ಹೇಳುವುದಿದೆಯಾ?
ಉತ್ತರ :

ಪ್ರಶ್ನೆ ನಂ.14 : ನಿನ್ನ ಪರ ಸಾಕ್ಷಿ ವಿಚಾರಣೆ ಮಾಡುವಿಯಾ?
ಉತ್ತರ :

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಹೇಳಿಕೆಯ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

**ದಿನಾಂಕ:**16/06/2026
**ಸ್ಥಳ: ಪುತ್ತೂರು.**

1 **ನೇ** ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು